**ಅಪರ ಹಿರಿಯ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣ.**

ಉಪಸ್ಥಿತರು ಃ

**ಶ್ರೀ ಮಹದೇವಪ್ಪ ಹೆಚ್., ಬಿ.ಎ.,ಎಲ್.ಎಲ್.ಬಿ.**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಶ್ರೀರಂಗಪಟ್ಟಣ.**

ದಿನಾಂಕ 30 ನೇ ಜನವರಿ ಮಾಹೆ 2024

**ಓ.ಎಸ್. ನಂ.24/2008**

ವಾದಿ ಃ ಎಂ.ಮಹದೇವು

ವಿರುದ್ಧ

ಪ್ರತಿವಾದಿಗಳು ಃ ಮದೇಗೌಡ ಮತ್ತು ಇತರರು

ಅರ್ಜಿದಾರರು ಃ ಕುಸುಮ್ ತಯಾಲ್

ವಿರುದ್ಧ

ಎದುರುದಾರರು ಃ ಮದೇಗೌಡ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ ಃ 15**

**ಃ ನ್ಯಾ.ಪ್ರ.ಸಂ. ಕ್ರಮಾದೇಶ 7 ನಿಯಮ 11 ಹಾಗೂ ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯ ಸಂಖ್ಯೆ 15 ರ ಮೇಲೆ ಮಾಡಲಾದ ಆದೇಶ ಃ**

ಅರ್ಜಿದಾರರು/ಪ್ರತಿವಾದಿ 6 ರವರು ಈ ಅರ್ಜಿಯನ್ನು ವಾದಿಯ ವಿರುದ್ಧ ಸಲ್ಲಿಸುವ ಮುಖಾಂತರ ವಾದಪತ್ರವನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. ಪ್ರತಿವಾದಿ 6 ರವರು ತಮ್ಮ ಅರ್ಜಿಯೊಂದಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ, ಗೌರವಾನ್ವಿತ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ದಾವೆಯಲ್ಲಿ ವಿಚಾರಣೆ ನಡೆಸಿ, ತೀರ್ಮಾನಿಸುವಂತೆ 2023 ರಲ್ಲಿ ಆದೇಶವಾಗಿದ್ದು, ಆ ನಂತರ ಈ ದಾವೆಯಲ್ಲಿ 6 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ. ಸದರಿ ಪ್ರತಿವಾದಿಯು ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ನಿಶಾನೆಯಾಗಿ ಗುರುತಿಸಲಾಗಿರುವ ಕ್ರಯದ ಕರಾರು ಪತ್ರದಲ್ಲಿ ಬೀಚನಹಳ್ಳಿ ಗ್ರಾಮದ ಆಸ್ತಿಯನ್ನು ಮಾರಾಟ ಮಾಡಿರುವುದಾಗಿ ನಮೂದು ಇರುತ್ತದೆ. ಆದರೆ ಸದರಿ ಬೀಚನಹಳ್ಳಿ ಗ್ರಾಮ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಇರುವುದಿಲ್ಲ. ಆದರೆ ಸದರಿ ಆಸ್ತಿಯು ಬೀಚನಕುಪ್ಪೆ ಗ್ರಾಮದಲ್ಲಿದ್ದು, ನಿಪಿ.1 ರಲ್ಲಿಯೇ ಸದರಿ ಆಸ್ತಿಯು ಎಲ್ಲಿ ಇರುತ್ತದೆಂದು ತಿಳಿಸಿರುವುದಿಲ್ಲ. ಸದರಿ ಬೀಚನಹಳ್ಳಿ ಗ್ರಾಮ ಶ್ರೀರಂಗಪಟ್ಟಣದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಇಲ್ಲದೇ ಇರುವುದರಿಂದ ಈ ನ್ಯಾಯಾಲಯಕ್ಕೆ ವಿಚಾರಣೆ ನಡೆಸುವ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಿ ವಾದಪತ್ರವನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಸದರಿ ಅರ್ಜಿಗೆ ವಾದಿಯು ತಕರಾರು ಸಲ್ಲಿಸಿದ್ದು ತಮ್ಮ ತಕರಾರಿನಲ್ಲಿ ಪ್ರತಿವಾದಿ 6 ರವರು ಸಲ್ಲಿಸಿರುವ ಈ ಅರ್ಜಿಯು ಕಾನೂನಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ವಾದಿಯು ಈ ದಾವೆಯನ್ನು ನಿರ್ದಿಷ್ಟ ಕರಾರು ಪರಿಪಾಲನೆ ಆದೇಶ ಕೋರಿ ಸಲ್ಲಿಸಿದ್ದು, ವಾದಪತ್ರದ ಸಂಗತಿಗಳನ್ನು ತಕರಾರಿನ ಭಾಗವಾಗಿ ಪರಿಗಣಿಸಬೇಕೆಂದು ತಿಳಿಸುವ ಮುಖಾಂತರ ಮುಂದುವರೆದು ಪ್ರತಿವಾದಿಯು ಸುಳ್ಳು ಸಂಗತಿಗಳನ್ನು ಸೃಷ್ಟಿಸಿಕೊಂಡು ಈ ಅರ್ಜಿ ಸಲ್ಲಿಸಿರುತ್ತಾರೆ. ಈಗಾಗಲೇ ದಾವೆಯಲ್ಲಿ ದಿನಾಂಕಃ05.11.2007 ರ ಕ್ರಯದ ಕರಾರು ಪತ್ರದ ಮೇಲೆ ವಿಚಾರಣೆ ನಡೆದು ನಿಪಿ.1 ರಲ್ಲಿ ನಮೂದಿಸಿರುವ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟಂತೆ ವಿಚಾರಣೆ ನಡೆದು ದಿನಾಂಕಃ21.10.2010 ರಂದು ದಾವೆಯು ಡಿಕ್ರಿಯಾಗಿತ್ತು. ಸದರಿ ಡಿಕ್ರಿಯ ವಿರುದ್ಧ ಪ್ರತಿವಾದಿಗಳು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಆರ್.ಎ. ನಂ.5019/2020 ರಂತೆ ಅಪೀಲನ್ನು

ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಪುನಃ ವಿಚಾರಣೆ ನಡೆಸಿ ತೀರ್ಪು ನೀಡುವಂತೆ ನಿರ್ದೇಶಿಸಿದ್ದು, ತದನಂತರ 6 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ. ಯಾವುದೇ ವಾದಪತ್ರವನ್ನು ತಿರಸ್ಕರಿಸುವಾಗ ಕೇವಲ ವಾದಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ಮಾತ್ರ ಪರಿಶೀಲಿಸಬೇಕು. ದಾಖಲೆಗಳನ್ನು ಪರಿಶೀಲಿಸುವ ಅವಶ್ಯಕತೆ ಇರುವುದಿಲ್ಲ. ನ್ಯಾಯಾಲಯದ ಕಾಲಹರಣ ಮಾಡುವ ಉದ್ದೇಶಕ್ಕಾಗಿ ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಸುಳ್ಳು ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಈ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಈ ಮೇಲಿನ ವಾಸ್ತವಾಂಶಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

<u>ಅಂಶಗಳು</u>

1. ಪ್ರತಿವಾದಿ 6 ರವರು ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದು ರುಜುವಾತುಪಡಿಸುವ ಮುಖಾಂತರ ವಾದಪತ್ರವನ್ನು ತಿರಸ್ಕರಿಸಲು ಸಕಾರಣಗಳನ್ನು ನೀಡಿದ್ದಾರೆಯೇ ?

2. ಯಾವ ಆದೇಶ ?

5. ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ಮೇಲಿನ ಅಂಶಗಳಿಗೆ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ ನಂ.1 ಕ್ಕೆ ಃ ನಕರಾತ್ಮಕವಾಗಿ

ಅಂಶ ನಂ.2 ಕ್ಕೆ ಃ ಮಾಡಲಾದ ಅಂತಿಮ ಆದೇಶ ಈ
ಕೆಳಕಂಡ ಕಾರಣಗಳಿಗಾಗಿ

ಃ ಕಾರಣಗಳು ಃ

7. ಅಂಶ ನಂ.**1** ಕ್ಕೆ ಃ ಈ ಅರ್ಜಿಯನ್ನು ಪ್ರತಿವಾದಿ 6 ರವರು ಈ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲದೇ ಇರುವುದರಿಂದ ವಾದಪತ್ರವನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ವಾದಿಯು ಈ ದಾವೆಯನ್ನು ನಿಪಿ.1 ಕ್ರಯದ ಒಪ್ಪಂದದ ಕರಾರು ಪತ್ರವನ್ನು ಆಧರಿಸಿ ಪ್ರತಿವಾದಿಗಳ ವಿರುದ್ದ ನಿರ್ದಿಷ್ಟ ಕರಾರು ಪರಿಪಾಲನೆ ಆದೇಶ ಕೋರಿ ಸಲ್ಲಿಸಿದ್ದು, ಸದರಿ ನಿಪಿ.1 ದಾಖಲೆಯನ್ನು ಪರಿಶೀಲಿಸಲಾಗಿ ದಿನಾಂಕಃ07.05.2007 ರಂದು ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ಪ್ರತಿವಾದಿ 1 ರಿಂದ 5 ರವರು ಈ ದಾಖಲೆಯನ್ನು ಬರೆದುಕೊಟ್ಟಿದ್ದು, ಸದರಿ ದಾಖಲೆಯಲ್ಲಿ ದಾವಾ ಆಸ್ತಿಯು ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಬೀಚನಹಳ್ಳಿ ಗ್ರಾಮದಲ್ಲಿಯ ಸರ್ವೆ ನಂ.69/ಪಿ1 ರಲ್ಲಿ ಒಟ್ಟು 2 ಎಕರೆ 22 ಗುಂಟೆ ಎಂದು ನಮೂದು ಇರುತ್ತದೆ. ಪ್ರತಿವಾದಿ 6 ರವರು ಹೇಳಿದಂತೆ ಆ ರೀತಿ ಬೀಚನಹಳ್ಳಿ ಗ್ರಾಮ ಶ್ರೀರಂಗಪಟ್ಟಣ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದರೆ ನ್ಯಾಯಾಲಯವು ವಾದಪತ್ರವನ್ನು ಕೇವಲ ವಾದಪತ್ರದಲ್ಲಿ ತಿಳಿಸಿದ ಸಂಗತಿಗಳನ್ನು ಆಧರಿಸಿ ಆದೇಶ ಮಾಡಬೇಕೆ ಹೊರತು ಹಾಜರುಪಡಿಸಿರುವ ದಾಖಲೆಗಳನ್ನು ಆಧರಿಸಿ ಆದೇಶ ಮಾಡಲು ಬರುವುದಿಲ್ಲ. ಅದೇ ರೀತಿ ವಾದಪತ್ರವನ್ನು ಕೇವಲ ಅದರಲ್ಲಿ ತಿಳಿಸಿದ ಸಂಗತಿಗಳನ್ನು ಆಧರಿಸಿ ಮಾತ್ರ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ರಡಿಯಲ್ಲಿ ತಿಳಿಸಿದಂತೆ ಆದೇಶ ಮಾಡಬೇಕೆ ಹೊರತು ಲಿಖಿತ ತಕರಾರಿನ ಸಂಗತಿಗಳನ್ನು ಪರಿಗಣಿಸಲು ಬರುವುದಿಲ್ಲ,

8. ಈ ಹಂತದಲ್ಲಿ ನ್ಯಾಯಾಲಯವು

**Code of Civil Procedure : U/o 7 Rule 11 - Rejection of plaint - the plaint shall be rejected in following cases.**

**a) Where it does not disclose a cause of action.**

**b) Where the relief claim is under valued and the plaintiff, on being required by the court to so correct the valuation within a time to be fixed by the court fails to do so.**

**c) Where the relief claim is properly valued, but the plaint is returned upon paper insufficiently stamped and the plaintiff on being required by the court to supply the requisite stamp paper within a time to be fixed by the court, fails to do so.**

**d) Where the suit appears from the statement in the paint to be barred by any law.**

**e) Where it is not filed in duplicate.**

**f) Where the plaintiff fails to comply with the provisions of rule 9.**

**(provided that the time fixed by the court for the correction of the valuation or supplying of the requisite stamp papers shall not be extended unless the court, for reasons to be recorded, is satisfied that the plaintiff was prevented by any cause of an exceptional nature from correcting the valuation or supplying the requisite stamp papers, as the case may be, within the time fixed by the court and that refusal to extend such time would cause grave injustice to the plaintiff).**

ಈ ಮೇಲಿನ ಕಲಂ ಅನ್ನು ಪರೀಕ್ಷಿಸಲಾಗಿ ವಾದಿ ತನ್ನ ವಾದಪತ್ರದಲ್ಲಿ ದಾವೆಗೆ ಉಂಟಾದ ವ್ಯಾಜ್ಯ ಕಾರಣವನ್ನು ತಿಳಿಸದಿದ್ದರೆ, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅದರ ಮೌಲ್ಯಕ್ಕೆ ಅನುಗುಣವಾಗಿ ಮೌಲ್ಯೀಕರಿಸದಿದ್ದರೆ,

ಸೂಕ್ತ ಸ್ಟಾಂಪ್ ಪೇಪರ್ ಮೇಲೆ ದಾಖಲೆ ಬರೆಯದೆ ಇದ್ದರೆ, ಅಂತಹ ಸಂದರ್ಭದಲ್ಲಿ ಅದನ್ನು ನ್ಯಾಯಾಲಯವು ಸೂಕ್ತ ಕಾರಣ ನೀಡಿ ಅವಕಾಶ ಮಾಡಿಕೊಟ್ಟರೂ ಸಹ ಅದನ್ನು ಸರಿಯಾಗಿ ಪರಿಪಾಲನೆ ಮಾಡದೇ ಇದ್ದರೆ, ಯಾವುದಾದರೂ ನಿರ್ಧಿಷ್ಟ ಕಾನೂನಿನಡಿಯಲ್ಲಿ ನಿರ್ಭಂದವಿದ್ದರೂ ಸಹ ದಾವೆ ಸಲ್ಲಿಕೆಯಾಗಿದ್ದರೆ ಮತ್ತು ವಾದಪತ್ರದೊಂದಿಗೆ ಪ್ರತಿಗಳನ್ನು ಹಾಜರುಪಡಿಸದೇ ಇದ್ದರೆ ಮಾತ್ರ ವಾದಪತ್ರವನ್ನು ತಿರಸ್ಕಾರ ಮಾಡಬಹುದಾಗಿರುತ್ತದೆ ಎಂದು ಇರುತ್ತದೆ.

9. ಈ ದಾವೆಯಲ್ಲಿ ವಾದಿಯ ವಾದಪತ್ರವನ್ನು ಪರಿಶೀಲಿಸಲಾಗಿ ಸದರಿ ವಾದಪತ್ರದಲ್ಲಿ ದಾವಾ ಆಸ್ತಿಯು ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಬೀಚನ ಕುಪ್ಪೆ ಗ್ರಾಮದಲ್ಲಿಯ ಸರ್ವೆ ನಂ.69/ಪಿ1 ರಲ್ಲಿ ಒಟ್ಟು 2 ಎಕರೆ 22 ಗುಂಟೆ ಎಂದು ನಮೂದು ಇರುತ್ತದೆ. ಸದರಿ ಆಸ್ತಿಯ ಚೆಕ್ಕು ಬಂದಿ ಮತ್ತು ಆಸ್ತಿಯು ಯಾವ ವ್ಯಾಪ್ತಿಯಲ್ಲಿದೆ ಎಂದು ವಾದಿ ಮತ್ತು ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲೆಗಳಲ್ಲಿ ಸ್ಪಷ್ಟವಾಗಿ ಸದರಿ ಆಸ್ತಿಯು ಬೀಚನಕುಪ್ಪೆ ಗ್ರಾಮದಲ್ಲಿರುತ್ತದೆ ಎಂದು ನಮೂದು ಇರುತ್ತದೆ. ನ್ಯಾಯಾಲಯವು ಕೇವಲ ವಾದಪತ್ರವನ್ನು ಪರಿಶೀಲಿಸಿ ಆದೇಶ ಮಾಡಬೇಕಾಗಿರುವುದರಿಂದ ಸದರಿ ವಾದಪತ್ರದಲ್ಲಿ ಯಾವುದೇ ತಪ್ಪುಗಳು ಆಗದೇ ಇರುವುದರಿಂದ ವಾದಪತ್ರವನ್ನು ತಿರಸ್ಕರಿಸುವ ಪ್ರಶ್ನೆಯೇ ದಾವೆಯಲ್ಲಿ ಉದ್ಭವಿಸಿರುವುದಿಲ್ಲ.

10. ಈ ಹಂತದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚನ್ಯಾಯಾಲಯದ ತೀರ್ಪುಗಳು:

**1) Civil Appeal No.5641/2021 - Salim D. V/s Agboatwala and others V/s Shamalji Oddhavji Thakkar and others.**

**2) (2007)2 KCCR 1213 - Sri. Andanur Rajashekar V/s Sri. Vasavi Industrial Enterprises and others.**

**3) (1992)1 KLJ 173 - Narayanaswamy L. V/s B.Bijaraj.**

**4) (1994)5 KLJ 357 - E.S.Rajan V/s R.Mohan.**

**5) (2010)3 KLJ 80 - K.S.Srinivasaiah V/s Munivenkatamma.**

**6) Civil Appeal No.5187/2001 - Panchanamdhara & others V/s Monmatha Maity and dead by Lrs.**

**7) AIR 1999 Rajastan 102 Mohan Lal Sukhadia University V/s Miss. Priya Soloman.**

**8) CRP 189/2019 Parmod Chuni V/s M/s Excel Pack Pvt. Ltd., (Delhi High Court).**

**9) Civil Appeal No.3038/2008 - Kamala & others V/s K.T.Eshwara & others.**

**10) (1972)2 SCC 757 - Dr.Jiwan Lal & others V/s Brij Mohan Mehra & another.**

**11) Civil Appeal No.2826 - 2827/2016 - Welspun Speciality Solutions Ltd., (Formerly known as Remi metals, Gujarat Ltd.,) V/s Oil and Natural Gas Corporation Ltd.**

ಸದರಿ ತೀರ್ಪುಗಳನ್ನು ಪರಿಶೀಲಿಸಲಾಗಿ ನ್ಯಾಯಾಲಯವು ಕಾಲಮಿತಿಯ ವಿಷಯ ಬಂದಾಗ ಅದನ್ನು ಯಾವ ರೀತಿ ನಿರ್ಧರಿಸಬೇಕು ಮತ್ತು ವಾದಪತ್ರವನ್ನು ಕೇವಲ ವಾದಪತ್ರದಲ್ಲಿ ತಿಳಿಸಿದ ಸಂಗತಿಗಳನ್ನು ಪರಿಗಣಿಸಿ

ಮಾತ್ರ ಸಿಪಿಸಿ ಕ್ರಮಾದೇಶ 7 ನಿಯಮ 11 ರಡಿಯಲ್ಲಿ ಆದೇಶ ಮಾಡಬೇಕು. ಪ್ರತಿವಾದ ಪತ್ರದ ಸಂಗತಿಗಳನ್ನು ಪರಿಗಣಿಸಬಾರದೆಂದು ಇರುತ್ತವೆ. ಪ್ರತಿವಾದಿ 6 ರವರು ಅರ್ಜಿಯನ್ನು ಪುರಸ್ಕರಿಸಲು ಸಕಾರಣಗಳನ್ನು ನೀಡಿರುವುದಿಲ್ಲ. ಆದ್ದರಿಂದ ಅಂಶ ನಂ.1 ಕ್ಕೆ ನಕರಾತ್ಮಕವಾಗಿ ಉತ್ತರಿಸಲಾಗಿದೆ.

11. <u>ಅಂಶ ನಂ**.2** ಃ</u> ಈ ಮೇಲಿನ ಅಂಶ ನಂ**.**1 ರಲ್ಲಿ ಚರ್ಚಿಸಲಾದಂತೆ ಮಾಡಲಾದ ಆದೇಶ ಃ

<u>ಆದೇಶ</u>

- ಪ್ರತಿವಾದಿ *6* ರವರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ *7* ನಿಯಮ *11* ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ *15* ನ್ನು ವಜಾಗೊಳಿಸಲಾಗಿದೆ*.*

- ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲ.

***(***ಆದೇಶವನ್ನು ಬೆರಳಚ್ಚುಗಾರರಿಗೆ ಗಣಕ ಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ ***30.01.2024*** ರಂದು ಘೋಷಿಸಲಾಯಿತು***.)***

ಅಪರ ಹಿರಿಯ ಸಿವಿಲ್‌ನ್ಯಾಯಾಧೀಶರು,
ಶ್ರೀರಂಗಪಟ್ಟಣ.